# ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಚರಿತ್ರೆ ವಿಭಾಗ

### ಪಾಕ್ಷಿಕ ಮಾತು –39

# ವಿಜಯನಗರ ಕಾಲದ ತಳಸಮುದಾಯಗಳು : ಚರಿತ್ರೆ ಮತ್ತು ಸಂಸ್ಕೃತಿ

19.11.2024

ಕನ್ನಡ ವಿಶ್ವವಿದ್ಯಾಲಯ, ಹಂಪಿ. ಚರಿತ್ರೆ ವಿಭಾಗದ ವತಿಯಿಂದ ದಿನಾಂಕ 19.11.2024 ರಂದು ಪಾಕ್ಷಿಕ ಮಾತು –39 ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂಶೋಧನಾ ವಿದ್ಯಾರ್ಥಿಯಾದ **ಲೋಕೇಶ ಟಿ.** ಅವರು **ವಿಜಯನಗರ ಕಾಲದ ತಳಸಮುದಾಯಗಳು: ಚರಿತ್ರೆ ಮತ್ತು ಸಂಸ್ಕೃತಿ** ಎಂಬ ವಿಷಯ ಕುರಿತು ವಿಚಾರ ಮಂಡಿಸಿದರು. ವಿಜಯನಗರಪೂರ್ವ ಮತ್ತು ವಿಜಯನಗರನಂತರದ ಕಾಲಘಟ್ಟದಲ್ಲಿ ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದಿರುವ ತಳಸಮುದಾಯಗಳು ಪ್ರಸ್ತುತ ಈ ವೃತ್ತಿ ಸಮುದಾಯಗಳೇ ಜಾತಿಕೇಂದ್ರಿತವಾಗಿ ತಮ್ಮ ಅಸ್ಮಿತೆಯ ಕುರಿತು ವಿಷಯವನ್ನು ಮಂಡಿಸಿದರು.



ಲೋಕೇಶ್ ಟಿ. ಅವರು ವಿಜಯನಗರ ಕಾಲದ ತಳಸಮುದಾಯಗಳು: ಚರಿತ್ರೆ ಮತ್ತು ಸಂಸ್ಕೃತಿ ಎಂಬ ವಿಷಯವನ್ನು ಮಂಡಿಸಿದರು.

ಚರಿತ್ರೆ ವಿಭಾಗದ ಹಿರಿಯ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ **ಡಾ.ಕೆ.ಮೋಹನ್‌ಕೃಷ್ಣ ರೈ.** ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ತಳಸಮುದಾಯ ಎನ್ನುವ ಚಾರಿತ್ರಿಕ ಗ್ರಹಿಕೆ ಚರಿತ್ರೆ ರಚನೆಯಲ್ಲಿ ಕಾಣಿಸಿಕೊಂಡ ಮೇಲೆ ಅದರ ಸೈದ್ಧಾಂತಿಕ ನಿರೂಪಣೆ ಗಟ್ಟಿಗೊಂಡಿತು. ಪ್ರತಿ ಚಾರಿತ್ರಿಕ ಕಾಲಘಟ್ಟದಲ್ಲಿ ಶ್ರೀಮಂತ ಸಮಾಜ, ಮಧ್ಯಮ ಸಮಾಜ ಹಾಗೂ ತಳಸಮುದಾಯಗಳು ಇರುವುದು ಚರಿತ್ರೆಯಲ್ಲಿ ಗುರುತಿಸಬಹುದು. ಜೊತೆಗೆ ಈ ತಳಸಮುದಾಯಗಳು ಪ್ರಸ್ತುತದಲ್ಲಿ ಎದುರಿಸುತ್ತಿರುವ ಅಸ್ಮಿತೆಯ ಸಮಸ್ಯೆಗಳ ಕುರಿತು ಅವರು ಅಧ್ಯಕ್ಷೀಯ ನುಡಿಯನ್ನಾಡಿದರು.

ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿಗಳು ಚರ್ಚೆ ಮತ್ತು ಸಂವಾದದಲ್ಲಿ ಭಾಗವಹಿಸಿದರು. ಪಾಕ್ಷಿಕ ಮಾತು ಕಾರ್ಯಕ್ರಮದ ಸಂಚಾಲಕರಾದ **ಪ್ರದೀಪ್ ಹೆಚ್.** ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ವಿಭಾಗದ ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳು ಮತ್ತು ಬೋಧಕೇತರ ಸಿಬ್ಬಂದಿಯವರು ಉಪಸ್ಥಿತರಿದ್ದರು.



